ಶ್ರೀ ಶರಣಪ್ಪ ಭೈರಿ.—ಚಿತಾಪುರ್–ಯಾರಗಲ್ ರಸ್ತೆಯನ್ನು ಸಮಗ್ರ ಗ್ರಾಮಾಂತರ ರಸ್ತೆ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿದ್ದು ಪ್ರಗತಿಯಲ್ಲಿದೆ ಎಂದು ಹೇಳಿದ್ದೀರಿ. ಇದನ್ನು ಪಿಡಬ್ಲ್ಯೂಡಿ ಯಲ್ಲಿ ತೆಗೆದುಕೊಂಡು ಆದಷ್ಟು ಜಾಗ್ರತೆ ಮಾಡಿದರೆ ಇದರಿಂದ ೫೦ ಹಳ್ಳಿಗಳಿಗೆ ಲಾಭ ಆಗುತ್ತದೆ. ಆದರೆ ಇದನ್ನು ತಾವು ಐ.ಸಿ ಆರ್.ಎಲ್.ನಲ್ಲಿ ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ಇದನ್ನು ಸುಮಾರು ದಿವಸಗಳಿಂದಲೂ ಪೂರ್ತಿಮಾಡಿಲ್ಲ ಇದಕ್ಕೆ ಕಾರಣವೇನು ? ಆದ್ದರಿಂದ ಆದಷ್ಟು ಬೇಗ ವಾಹೆಯ್ ದಿಗ್ಯಾಂವವನ್ನು ತೆಗೆದುಹಾಕಿ ಚಿತಾಪುರ ರಸ್ತೆಯನ್ನು ತೆಗೆದುಕೊಂಡರೆ ಒಳ್ಳೆಯದು ಎಂದು ಹೇಳುತ್ತೇನೆ.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸರ ಅಭಿಪ್ರಾಯವನ್ನು ನಾನು ಈ ರೀತಿ ತಿಳಿದುಕೊಂಡಿರುತ್ತೇನೆ. ಈ ರಸ್ತೆಯ ಕೆಲಸವನ್ನು ಐ.ಸಿ.ಆರ್.ಎಲ್. ನಲ್ಲಿ ತೆಗೆದಂಕೊಂಡರೆ ರಸ್ತೆಗೆ ಹಣ ಸರಿಯಾಗಿ ಒದಗುವುದಿಲ್ಲವೆಂದು ಮತ್ತು ಕೆಲಸವು ನಿಧಾನವಾಗುತ್ತದೆಂದು ಇದನ್ನು ಪಿಡಬ್ಲ್ಯೂಡಿಗೆ ತೆಗೆದುಕೊಂಡರೆ ಕೆಲಸ ಚೆನ್ನಾಗಿ ನಡೆಯುತ್ತದೆಂದು ಅಭಿಪ್ರಾಯಪಟ್ಟದ್ದಾರೆಂದು ಕಾಣುತ್ತದೆ. ಆದರೆ ನಮ್ಮ ಪಿಡಬ್ಲ್ಯೂಡಿಗೆ ತೆಗೆದುಕೊಂಡರೂ, ಹಣಕಾಸಿನ ಪರಿಸ್ಥಿತಿಯ ಮೇಲೆ ನೋಡಿಕೊಂಡು, ಆದಷ್ಟು ತೀವ್ರವಾಗಿ ಪರಿಶೀಲನೆ ಮಾಡುವುದಕ್ಕೆ ಪ್ರಯತ್ನಮಾಡುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ ಈ ಮೇಲ್ಕಂಡ ರಸ್ತೆಗಳನ್ನು ೧೯೭೨–೭೩ರಲ್ಲಿ ಮಂಜೂರು ಮಾಡಿದ್ದೀರಿ. ಇಲ್ಲಿಯತನಕ ಕೆಲಸ ನಡೆದಿಲ್ಲ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮಾಡುತ್ತೇವೆಂದು ೧೯೭೮–೭೯ರಲ್ಲಿ ಹೇಳುತ್ತಿದ್ದೀರಿ. ಈಗಾಗಲೇ ಸಾಕಷ್ಟು ನಿಧಾನವಾಗಿದೆ ಆದ್ದರಿಂದ ದಯಮಾಡಿ ಇದಕ್ಕೆ ಸ್ವಲ್ಪ ಪ್ರಾಶಸ್ತ್ಯ ಕೊಟ್ಟು, ಆದಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—೧೯೭೨–೭೩ರಲ್ಲಿ ನಾವು ಇದನ್ನು ಐ. ಸಿ. ಆರ್. ಎಲ್. ರಸ್ತೆಯಾಗಿ ತೆಗೆದುಕೊಂಡರು ರಿಲೀಪ್ ವರ್ಕ್ಸ್‌ನಲ್ಲಿ ಮಣ್ಣು ಕೆಲಸಮಾಡುವುದಕ್ಕೆ ಸಾಧ್ಯವಾಯಿತು. ೧೯೭೨–೭೩ರಿಂದ ಇಲ್ಲಿಯವರೆಗೆ ಆಗಿಲ್ಲವೆಂದು ತಾವು ಆತಂಕ ವ್ಯಕ್ತಪಡಿಸುತ್ತಿದ್ದೀರಿ. ಆದ್ದರಿಂದ ಹಣಕಾಸನ್ನು ಎಷ್ಟು ಜೋಡಿಸುವುದಕ್ಕೆ ಸಾಧ್ಯವೋ ನೋಡಿ ತೀವ್ರವಾಗಿ ಈ ಕೆಲಸವನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

MR. SPEAKER.—Question No. 297 is held over.

Hospital Building at Huliyurdurga

316. SRI D. T. MAYANNA (Huliyurdurga).—Will the Minister for Health and Family Welfare be pleased to state :—

(*a*) whether it has come to the notice of Government that the Hospital Building at Huliyurdurga, Tumkur District is very old one ;

(*b*) if so, the steps taken by Government to construct a new building ?

SRI R. S. PATIL (Minister for Labour and Excise) [On behalf of SRI M. MALLAPPA (Minister for Health and Family Welfare)].—

(*a*) No.

---

† indicates that remarks or speeches have not been revised by the member concerned.

(*b*) No representation has been received for construction of a new building. This matter is not under the consideration of Government.

ಶ್ರೀ ಡಿ. ಟಿ ಮಾಯಣ್ಣ.—ಸ್ವಾಮಿ, ತುಮಕೂರು ಜಿಲ್ಲೆಯ ಹುಲಿಯೂರುದುರ್ಗದ ಆಸ್ಪತ್ರೆಯು ಕಟ್ಟಡವು ಬಹಳ ಪುರಾತನವಾದುದೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಪ್ರಶ್ನೆ ಕೇಳಿರುವುದಕ್ಕೆ ತಾವು ಇಲ್ಲ ಎಂದು ಉತ್ತರ ಹೇಳಿದ್ದೀರಿ. ಅಲ್ಲಿ ಹೊಸ ಆಸ್ಪತ್ರೆ ಕಟ್ಟಡವನ್ನು ಕಟ್ಟಿ, ಹೆಚ್ಚಿನ ವಾರ್ಡ್‌ಗಳನ್ನು ಮಾಡುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ?

† ಶ್ರೀ ಆರ್. ಎಸ್. ಪಾಟೀಲ್.—ಹೊಸ ಆಸ್ಪತ್ರೆ ಕಟ್ಟಡವನ್ನು ಕಟ್ಟದೇ ಹೆಚ್ಚಿನ ವಾರ್ಡ್ ಗಳನ್ನು ಮಾಡುವ ಪ್ರಶ್ನೆ ಬರುವುದಿಲ್ಲ. ಅಲ್ಲದೇ ಹೊಸ ಕಟ್ಟಡ ಕಟ್ಟಿಸುವ ಬಗ್ಗೆ ಯಾವ ಮನವಿಯೂ ಬಂದಿಲ್ಲ. ಅಥವಾ ಈ ವಿಷಯ ಸರ್ಕಾರದ ಗಮನದಲ್ಲಿಲ್ಲ. ಆದ್ದರಿಂದ ಈಗಿರುವ ಆಸ್ಪತ್ರೆ ಕಟ್ಟಡದಲ್ಲಿ ದುರಸ್ತಿ ಕೆಲಸ ಮಾಡುತ್ತಿದ್ದೇವೆ. ಅದರಲ್ಲಿ ೨ ವಾರ್ಡ್‌ಗಳನ್ನು ಕಟ್ಟಲಾಗಿದೆ.

ಶ್ರೀ ಡಿ. ಟಿ. ಮಾಯಣ್ಣ.—ಅಲ್ಲಿ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಗಾಗಿ ದಾನಿಗಳು ಕಟ್ಟಡ ಕಟ್ಟಿಸಿದ್ದಾರೆ. ಅದರಲ್ಲಿ ಒಂದೂ ವಿಂಗನ್ನು ಪ್ರಾರಂಭ ಮಾಡುತ್ತೀರಾ ?

ಶ್ರೀ ಆರ್. ಎಸ್. ಪಾಟೀಲ್.—ಆ ವಿಷಯ ಇಲ್ಲಿ ಇಲ್ಲ. ತಾವು ದುರಸ್ತಿ ವಿಷಯವನ್ನು ಮಾತ್ರ ಕೇಳಿದ್ದೀರಿ. ಅದನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಡಿ. ಟಿ. ಮಾಯಣ್ಣ.—ಹೊಸ ಆಸ್ಪತ್ರೆ ಕಟ್ಟಡ ಕಟ್ಟಿಸುವ ಬಗ್ಗೆ ಮನವಿಗಳು ಬಂದಿಲ್ಲ ಎಂದು ಹೇಳಿದ್ದೀರಿ. ಯಾರಿಂದ ಮನವಿಗಳು ಬರಬೇಕು ಸ್ವಾಮಿ ?

ಶ್ರೀ ಆರ್. ಎಸ್. ಪಾಟೀಲ್.—ಸಾರ್ವಜನಿಕರಿಂದ ಮತ್ತು ತಮ್ಮಂಥ ವಿ.ಐ.ಪಿಗಳಿಂದ ಮನವಿ ಗಳು ಬಂದಿಲ್ಲ ಎಂದು ಅರ್ಥ.

MR. SPEAKER.—I withhold Question No. 80(493) because the Hon'ble Minister had written a letter stating that he has to attend to some work.

Now Questions are over.

QUESTIONS FOR ANSWERS ON THE DAY
(But not taken up)

Roads in Chintamani

45. SRI ___ REDDY (Chintamani).—Will the Minister for Rural Development and Panchayat Raj be pleased to state:—

(*a*) the numbers of Kilometres of District Board Roads in Chintamani Taluk, transferred to Taluk Development Board;

(*b*) the number of Kilometres of roads which are formed under Drought Prone Area Programme in Chintamani Taluk;

(*c*) the authority maintaining those roads;

(*d*) the number of Kilometres of Inter Village Communication Rural Village Communication Roads formed out of famine relief founds and who is maintaining them in Chintamani Taluk;

(*e*) the amount required annually to maintain these roads;